## ಮಿಂಗ್ ಚಾನ್ ವೂ
## ಸಂದರ್ಶನ

◆ **ನಿಮ್ಮ ಬಾಲ್ಯದ ಪರಿಸರ,ಕುಟುಂಬ ಮತ್ತು ಶೈಕ್ಷಣಿಕ ದಿನಗಳ ನೆನಪುಗಳನ್ನು ಹಂಚಿಕೊಳ್ಳಿ**

ಅಪ್ಪಅಮ್ಮನಿಗೆ ನಾನೊಬ್ಬಳೇ ಮಗಳು. ಅವರು ಮುಕ್ತ ಮತ್ತು ವಿಶಾಲ ಮನೋಭಾವದವರಾಗಿದ್ದರು. ಇಬ್ಬರೂ ಹೊರಗಡೆ ದುಡಿಯುತ್ತಿದ್ದುದರಿಂದ ಬಹಳಷ್ಟು ಸಮಯವನ್ನು ನಾನು ಒಂಟಿಯಾಗಿ ಕಳೆಯಬೇಕಾಗುತ್ತಿತ್ತು. ಹೀಗಾಗಿ ಶಾಲಾ ದಿನಗಳಲ್ಲಿ ನಾನು ಹೆಚ್ಚು ಅಂತಃರ್ಮುಖಿಯಾಗಿರುತ್ತಿದ್ದೆ. ನನ್ನ ಪ್ರಾಥಮಿಕ ಶಾಲಾ ಶಿಕ್ಷಕರು ಬಹಳ ಕಟ್ಟುನಿಟ್ಟಿನ ಶಿಸ್ತುಪಾಲಕರಾಗಿದ್ದರು. ಅವೆಲ್ಲವು ನಿಜಕ್ಕೂ ಸಂಕಟದ ನೆನಪುಗಳು.

ಪ್ರೌಢಶಾಲೆ ತಲುಪಿದಾಗ ನನ್ನ ಸ್ಥಿತಿ ಸುಧಾರಿಸಿತು ಎನ್ನಬಹುದು. ಹೈಸ್ಕೂಲಿಗೆ ನಾನು ಬಸ್ಸಿನಲ್ಲಿ ಹೋಗಬೇಕಾಗಿತ್ತು. ಮನೆಯಿಂದ ಶಾಲೆಗೆ ಒಂದು ಗಂಟೆಯ ಪ್ರಯಾಣ. ಬಸ್ ಸ್ಟ್ಯಾಂಡ್‌ನಲ್ಲಿ ಪ್ರತಿ ದಿನ ಬೆಳಗ್ಗೆ ನನ್ನದೇ ಬಸ್ಸಿಗೆ ಹತ್ತಲು ಕಾಯುತ್ತಿದ್ದ ಸೀನಿಯರ್ ಹುಡುಗನೊಬ್ಬನಿದ್ದ. ಹಾಗಾಗಿ ಬಸ್ಸಿನ ಪ್ರಯಾಣ ನನಗೆ ದಿನದ ಬಹುಭಾಗ ಖುಷಿ ಹಾಗೂ ಲವಲವಿಕೆಯಿಂದ ಇರುವಂತೆ ಮಾಡಿತು. ಅವನ ಓದು ಮುಗಿಯುವವರೆಗೂ ನನಗವನ ಮೇಲೆ ಒಂದು ಬಗೆಯ ಆಕರ್ಷಣೆ ಇತ್ತು. ಶಾಲೆ ಬಿಡುವ ಮೊದಲು ಅವನ ತರಗತಿಗೆ ಹೋಗಿ ಪದ್ಯಗಳೇ ತುಂಬಿದ್ದ ಕಾಗದವನ್ನ ಪ್ರೇಮ ನಿವೇದನೆಯ ರೂಪದಲ್ಲಿ ಕೊಟ್ಟಿದ್ದೆ.ಅದೆಲ್ಲಿತ್ತೋ ಧೈರ್ಯ ಗೊತ್ತಿಲ್ಲ. ಅಂತಃರ್ಮುಖಿಯಾಗಿದ್ದ ನನ್ನನ್ನ ಬದಲಿಸಿದ ಘಟನೆ ಇದು. ಆದರೆ ಅವನಿಗೆ ಒಂದು ಮುತ್ತು ಕೊಡಬೇಕು ಅನ್ನೊ ನನ್ನ ಆಸೆ ಮಾತ್ರ ಫಲಿಸಲೇ ಇಲ್ಲ. ಅದು ಈಗಲೂ ಕಾಡುತ್ತೆ.

ಜೂನಿಯರ್ ಹೈಸ್ಕೂಲಿನ ಮತ್ತೊಂದು ಖುಷಿಯ ನೆನಪು ಎಂದರೆ ಶಾಲೆಯ ನಂತರ ಆತ್ಮೀಯ ಸ್ನೇಹಿತರೊಂದಿಗೆ ಬೀದಿ ಸುತ್ತುತ್ತಿದ್ದದ್ದು. ಮಧ್ಯಾಹ್ನದ ಊಟಕ್ಕೆ, ಬಬಲ್ ಟೀ ಮತ್ತು ಗರಿಗರಿಯಾದ ಖಾರದ ಚಿಕನ್ ಖರೀದಿಸಲು ನಾವು ಶಾಲೆಬಿಟ್ಟು ರಸ್ತೆಗಿಳಿಯುತ್ತಿದ್ದೆವು. ಎಲ್ಲಾ ವಿದ್ಯಾರ್ಥಿಗಳು ತರಗತಿಯ ನಂತರ ಹೀಗೆ ಬೀದಿ ಸುತ್ತಲು ಇಷ್ಟಪಡುತ್ತಿದ್ದರು.

◆ **ನಿಮ್ಮ ತಂದೆ ತಾಯಿಗಳ ವೃತ್ತಿ ಏನು? ಈಗ ನೀವು ಏನು ಕೆಲ್ಸ ಮಾಡ್ತಾ ಇದ್ದೀರಿ?**

ನಮ್ಮಪ್ಪ ವೂ-ಚಿಂಗ್-ಫಾ ತೈವಾನಿನ ಪ್ರಸಿದ್ಧ ಕವಿ ಮತ್ತು ಕಾದಂಬರಿಕಾರ. ತಾರುಣ್ಯದಲ್ಲೇ ಬರವಣಿಗೆ ರೂಢಿಸಿಕೊಂಡವರು. ದಿನಪತ್ರಿಕೆಯ ಸಂಪಾದಕರಾಗಿದ್ದರು. ಸರ್ಕಾರದ ಸಾಂಸ್ಕೃತಿಕ ವಿಭಾಗದ ಉಪ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. ಪ್ರಸ್ತುತ ರೇಡಿಯೋ ನಿರೂಪಕ. ನಿಮಗೆ ನೆನಪಿರಬಹುದು 'ಹೊಕ್ಕಳು' ಅನ್ನೊ ಹೆಸರಿನಲ್ಲಿ, ನೀವು ಅವರ ಕವಿತೆಯನ್ನು ಮೆಚ್ಚಿ ಕನ್ನಡಕ್ಕೆ ಅನುವಾದ ಮಾಡಿದ್ದೀರಿ. ನನ್ನ ತಾಯಿಯೂ ಅಷ್ಟೇ, ತೈವಾನಿನ ವಿಮಾ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಜೊತೆಗೆ ಮನೆಪಾಠ ಹೇಳಿಕೊಡುತ್ತಿದ್ದರು. ನನ್ನ ಬಗ್ಗೆ ಹೇಳುವುದಾದರೆ,ನಾನೊಬ್ಬ ಆಭರಣ ವಿನ್ಯಾಸಕಿ,ಚಿತ್ರ ಕಲಾವಿದೆ,ಲೇಖಕಿ ಮತ್ತು ರೇಡಿಯೋ ನಿರೂಪಕಿ.

◆ **ನಿಮ್ಮ ಮಾತೃ ಭಾಷೆ ಯಾವುದು ? ನಿಮ್ಮ ಹಬ್ಬ ಆಚರಣೆಗಳ ಬಗ್ಗೆ ತಿಳಿಸಿ**

ನನ್ನಪ್ಪ ಹಕ್ಕ ಜನಾಂಗಕ್ಕೆ ಸೇರಿದ್ದರೆ, ಅಮ್ಮ ಹೊಕೈನ್ ಗುಂಪಿನವಳು. ನಿಜ ಹೇಳಬೇಕೆಂದರೆ ನನ್ನ ಮಾತೃ ಭಾಷೆ ಹಕ್ಕ ಮತ್ತು ತೈವಾನಿಸ್ ಎರಡರ ಮಿಶ್ರಣ. ಸಂಪ್ರದಾಯ ಮತ್ತು ಹಬ್ಬಗಳ ಆಚರಣೆಯಲ್ಲಿ ಹಕ್ಕಾ ಮತ್ತು ಹೊಕೈನ್ ಜನರಲ್ಲಿ ಭಿನ್ನತೆ ಕಾಣಬಹುದು. ಉದಾಹರಣೆಗೆ ಗದ್ದಿಗೆ ಹಾಕುವ ಸಂಪ್ರದಾಯವನ್ನು ಎರಡೂ ಗುಂಪುಗಳು ಆಚರಿಸಿದರೂ, ಆಚರಣೆಯ ದಿನ ಮತ್ತು ಸಮಯ ಬೇರೆ ಬೇರೆ. ಆದರೆ ಎರಡು ಜನಾಂಗದ ಜನರೂ ತಮ್ಮ ಪೂರ್ವಜರ ಗೋರಿಗಳ ಮೇಲೆ ಕಾಗದ ನೇತು ಹಾಕಿ Joss paperಗಳನ್ನ ಉರಿಸುತ್ತಾರೆ. ಸತ್ತವರು ಮತ್ತು ಬದುಕಿದವರ ನಡುವೆ ಇದೊಂದು ಸ್ಪಿರಿಚುವಲ್ ಸೇತುವೆ

◆ **ನೀವು ಮೊದಲು ಕವಿತೆ ಬರೆಯಲು ಆರಂಭಿಸಿದ್ದು ಹೇಗೆ? ನಿಮ್ಮನ್ನು ಕವಿಯಾಗಲು ಪ್ರೇರೇಪಿಸಿದ ನಿರ್ದಿಷ್ಟ ಕ್ಷಣ ಯಾವುದು?**